# ಮೈಸೂರು ವಿಶ್ವವಿದ್ಯಾನಿಲಯ

## ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5


ಸಂ. : ದೈಶಿವಿ/ 136 /2023-24 ದಿನಾಂಕ : 22-06-2023

ಗೆ,

ಪ್ರಾಂಶುಪಾಲರು/ದೈಹಿಕ ಶಿಕ್ಷಣ ನಿರ್ದೇಶಕರು,
ಮೈಸೂರು ವಿಶ್ವವಿದ್ಯಾನಿಲಯದ ಘಟಕ ಹಾಗೂ ಸಂಯೋಜಿತ ಕಾಲೇಜುಗಳು,

ಮಾನ್ಯರೆ,

ವಿಷಯ: ವಿಭಾಗದ ವತಿಯಿಂದ "ಪ್ರಸ್ತುತ ಉನ್ನತ ಶಿಕ್ಷಣದಲ್ಲಿ ದೈಹಿಕ ಶಿಕ್ಷಣ ಮಹತ್ವ" ವಿಷಯ ಬಗ್ಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಿರುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮತ್ತು ನಿಯೋಜಿತ ಕಾಲೇಜುಗಳ ದೈಹಿಕ ಶಿಕ್ಷಣ ಅಧ್ಯಾಪಕರ ಸಂಘದ ವತಿಯಿಂದ ದಿನಾಂಕ 27-06-2023ರಂದು ಬೆಳಿಗ್ಗೆ 10-30ಕ್ಕೆ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ **"ಪ್ರಸ್ತುತ ಉನ್ನತ ಶಿಕ್ಷಣದಲ್ಲಿ ದೈಹಿಕ ಶಿಕ್ಷಣದ ಮಹತ್ವ"** ವಿಷಯದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಸದರಿ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ **ಡಾ. ಶ್ರೀಕಾಂತ ಆರ್**, ನೋಡಲ್ ಅಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ ಇವರು ವಿಷಯ ಮಂಡಿಸುವರು. ತತ್ಸಂಬಂಧವಾಗಿ ವಿಶ್ವವಿದ್ಯಾನಿಲಯದ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ನಿರ್ದೇಶಕರುಗಳನ್ನು ಸದರಿ ಕಾರ್ಯಾಗಾರಕ್ಕೆ ನಿಯೋಜಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ವಂದನೆಗಳೊಡನೆ,

ತಮ್ಮ ನಂಬುಗೆಯ,

22/6

ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 570 005

University of Mysore

**Department of Physical Education and**
**Mysore University Affiliated College**
**Physical Education Director's Association, Mysore**

University Level One Day Workshop on the Topic

# Emphasis on Physical Education in Present Higher Education Scenario

**Date:27.06.2023 Tuesday** **Time:10.30 am** **Place: DOSPESS Auditorium**

## Chief Guest:

**Smt. Shylaja V. R.** ***KAS***
Registrar, University of Mysore, Mysuru

**Prof. A.H.M.Vijayalakshmi,**
Joint Director, DCE, Mysore Region

## Guest of Honour:

**Dr. Krishnaiah P**
Former Director, DPE, University of Mysore

## Special Invitees:

**Dr. C. Krishna**
Former Director, DPE, University of Mysore

**Prof. Madialagan S**
Chairman, DOSPESS, University of Mysore

## Resource Person:

**Dr. Srikanth R**
Nodal Officer, Department of Collegiate Education , Bangalore

## Presided by:

**Prof. Venkatesh C**
Director, DPE, University of Mysore

*All are heartily Welcome*

| | | |
|---|---|---|
| **Dr. Bhaskar K.S.**<br>Secretary | **Dr. B.V.Ganesh**<br>Treasurer | **Dr. Udayakumar H.V.**<br>President |

**All the College Director of Physical Education and Sports, Coaches and Physical Education fetarnity, University of Mysore.**

**ಕಾರ್ಯಾಗಾರ** | ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಪ್ರೊ. ವಿಜಯಲಕ್ಷ್ಮಿ

# ಉನ್ನತ ಶಿಕ್ಷಣದಲ್ಲೂ ಕ್ರೀಡಾಕೂಟಗಳು ಅತ್ಯಂತ ಅವಶ್ಯಕ

• **ಕನ್ನಡಪ್ರಭ ವಾರ್ತೆ** ಮೈಸೂರು

ಉನ್ನತ ಶಿಕ್ಷಣದಲ್ಲಿ ಕ್ರೀಡೆಯು ಇಂದು ಅತ್ಯಂತ ಅವಶ್ಯಕವಾಗಿದೆ ಎಂದು ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಪ್ರೊ. ವಿಜಯಲಕ್ಷ್ಮಿ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ, ವಿಶ್ವವಿದ್ಯಾಲಯ ಅಧ್ಯಾಪಕರ ಸಂಘ, ದೈಹಿಕ ಶಿಕ್ಷಣ ಅಧ್ಯಾಪಕರ ಸಂಘದ ವತಿಯಿಂದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಆಯೋಜಿಸಲಾಗಿದ್ದ ಉನ್ನತ ಶಿಕ್ಷಣದಲ್ಲಿ ದೈಹಿಕ ಶಿಕ್ಷಣದ ಮಹತ್ವ ಕುರಿತ ಒಂದು ದಿನದ ಕಾರ್ಯಾಗಾರವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಉನ್ನತ ಶಿಕ್ಷಣದಲ್ಲಿ ಹಲವಾರು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತಹ ವಿದ್ಯಾರ್ಥಿಗಳಲ್ಲಿ ದೈಹಿಕ, ಮಾನಸಿಕ, ಭಾವನಾತ್ಮಕ ಆರೋಗ್ಯ ಕಾಪಾಡುವುದಲ್ಲದೆ ಅವರ ಬೌದ್ಧಿಕ ಗುಣಮಟ್ಟವು ಸಹ ಉತ್ತಮವಾಗಿದ್ದು, ಇಂತಹ ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳನ್ನು ಕೂಡ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಕ್ರೀಡೆಯಲ್ಲಿ ಭಾಗವಹಿಸುವಂತಹ ವಿದ್ಯಾರ್ಥಿಗಳು ಇಂದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಪದಕ ತಂದುಕೊಡುತ್ತಿರುವುದು ಸಹ ಹೆಮ್ಮೆಯ ವಿಷಯವಾಗಿದೆ ಎಂದು ಅವರು ಹೇಳಿದರು.



00000

ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿ ನೋಡಲ್ ಅಧಿಕಾರಿ ಡಾ.ಆರ್. ಶ್ರೀಕಾಂತ್ ಮಾತನಾಡಿ, ದೈಹಿಕ ಶಿಕ್ಷಣ ಮತ್ತು ಕ್ರೀಡೆಯು ಹಲವಾರು ಆಯಾಮಗಳಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿ ಜೀವನ ನಿರ್ವಹಣೆಗೆ ಅತ್ಯಂತ ವಿಪುಲವಾದ ಅವಕಾಶವನ್ನು ಕಲ್ಪಿಸುವ ಒಂದು ಉತ್ತಮ ವೇದಿಕೆಯಾಗಿದೆ ಎಂದರು.

ದೈಹಿಕ ಶಿಕ್ಷಣ ಮತ್ತು ಕ್ರೀಡೆ ಯೋಗ ಇವುಗಳ ಮೂಲಕ ಸ್ವಾಸ್ಥ್ಯ, ಆರೋಗ್ಯವಂತ ಸಮಾಜವನ್ನು ನಿರ್ಮಿಸುವುದರ ಜೊತೆಗೆ, ಇಂದಿನ ಯುವ ಜನತೆ ಆರೋಗ್ಯದ ಕಡೆ ಹೆಚ್ಚು ಹೆಚ್ಚು ಕಾಳಜಿ ವಹಿಸುತ್ತಿರುವುದರಿಂದ ಇಂದು ಕ್ರೀಡೆಯು ಆರೋಗ್ಯ, ಮನೋರಂಜನದಾಯಕ ಚಟುವಟಿಕೆಯ ಜೊತೆಗೆ ಸಾವಿರಾರು ಜನಗಳಿಗೆ ಉದ್ಯೋಗ ಅವಕಾಶ ಕಲ್ಪಿಸುವ ಉತ್ತಮ ವೇದಿಕೆಯಾಗಿದೆ. ಆರ್ಥಿಕ ಪುನಶ್ಚೇತನಕ್ಕೂ ಸಹ ದಾರಿಯಾಗಿದೆ ಎಂದು ಅವರು ತಿಳಿಸಿದರು.

ಇದೇ ವೇಳೆ ಡಾ.ಪಿ. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯಿತು. 100 ಹೆಚ್ಚು ವಿವಿಧ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರು, ಉಪನ್ಯಾಸಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ನಿರ್ದೇಶಕ ಡಾ.ಸಿ. ವೆಂಕಟೇಶ್, ನಿವೃತ್ತ ನಿರ್ದೇಶಕ ಡಾ.ಸಿ. ಕೃಷ್ಣ, ದೈಹಿಕ ಶಿಕ್ಷಣ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಎಚ್.ವಿ. ಉದಯಕುಮಾರ್, ಕಾರ್ಯದರ್ಶಿ ಡಾ.ಕೆ.ಎಸ್. ಭಾಸ್ಕರ್, ಖಜಾಂಚಿ ಡಾ.ಬಿ.ವಿ. ಗಣೇಶ್ ಇದ್ದರು. ಡಾ. ಶಾಂತರಾಜು ನಿರೂಪಿಸಿದರು. ಅಂತೋನಿ ಮೊಸಸ್ ಪ್ರಾರ್ಥಿಸಿದರು. ಡಾ.ಎಚ್.ಎನ್. ಭಾಸ್ಕರ ವಂದಿಸಿದರು.

UNIVERSITY OF MYSORE

Department of Physical Education and Mysore University Affiliated College

Physical Education Director's Association, Mysore

University Level One Day Workshop on the Topic

# Emphasis on Physical Education in Present Higher Education Scenario

## CERTIFICATE

This is to certify that Prof. / Dr. / Mr. / Mrs.......................................................................................

............................................................................................................................................has participated in One Day Workshop on "Emphasis on Physical Education in Present Higher Education Scenario" held at Department of Physical Education, Sports Pavilion, University of Mysore, Mysuru on June 27th 2023.

Dr. Bhaskar K.S.
Secretary

Dr. Udayakumar H.V.
President

Prof. C. Venkatesh C
Director, DPE, UOM, Mysuru

# ಕ್ರೀಡಾ ನಿರ್ವಹಣೆ ಕಲಿಸೋಣ

■ ವಿಜಯವಾಣಿ ಸುದ್ದಿಜಾಲ ಮೈಸೂರು

ದೈಹಿಕ ಶಿಕ್ಷಣ ಶಿಕ್ಷಕರು ಕ್ರೀಡೆಯನ್ನು ಕೇವಲ ಪಠ್ಯವಾಗಿ ಬೋಧಿಸದೆ ಕ್ರೀಡಾಕೂಟಗಳ ವ್ಯವಸ್ಥಾಪನಾ ಉಸ್ತುವಾರಿ, ನಿರ್ವಹಣೆ, ಆಯೋಜನೆ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಡೋಣ ಎಂದು ಕಾಲೇಜು ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿ ಡಾ.ಆರ್. ಶ್ರೀಕಾಂತ್ ಹೇಳಿದರು.

ಮೈಸೂರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ವಿಭಾಗ ಮತ್ತು ಅಧ್ಯಾಪಕರ ಸಂಘ, ದೈಹಿಕ ಶಿಕ್ಷಣ ಅಧ್ಯಾಪಕರ ಸಂಘದ ಸಹಯೋಗದಲ್ಲಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ಉನ್ನತ ಶಿಕ್ಷಣದಲ್ಲಿ ದೈಹಿಕ ಶಿಕ್ಷಣದ ಮಹತ್ವ' ಕಾರ್ಯಾಗಾರದಲ್ಲಿ ಮಾತನಾಡಿದರು. ಪ್ರೊ ಕಬಡ್ಡಿ, ಐಪಿಎಲ್ ಕ್ರಿಕೆಟ್ ನಂತಹ ಕ್ರೀಡಾಕೂಟಗಳು, ಹಾಕಿ, ಟೆನಿಸ್, ವಾಲಿಬಾಲ್, ಯೋಗ, ಮ್ಯಾರಥಾನ್... ಹೀಗೆ ಹಲವು ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆದರೆ, ಇದಕ್ಕಾಗಿ ಯಾವುದೇ ಕ್ರೀಡಾ ಹಿನ್ನೆಲೆಯಿರದ ಸಂಸ್ಥೆಗಳು ಹುಟ್ಟಿಕೊಳ್ಳುತ್ತಿರುವುದು ದುರದೃಷ್ಟಕರ ಎಂದರು.

ಉನ್ನತ ಶಿಕ್ಷಣದಲ್ಲಿ ಕ್ರೀಡಾ ನಿರ್ವಹಣೆ, ಕ್ರೀಡಾ ಮನೋವಿಜ್ಞಾನ ಸೇರಿದಂತೆ ಹಲವಾರು ಕ್ರೀಡಾ ವಿಷಯಗಳ ಅಧ್ಯಯನ ಮಾಡಬೇಕು ಎಂದರು.

ಕ್ರೀಡೆಯ ಹಿನ್ನೆಲೆಯುಳ್ಳವರು ಅತ್ಯುತ್ತಮವಾಗಿ ಕ್ರೀಡೆಯ ನಿರ್ವಹಣೆ ಮಾಡುವುದನ್ನು ತಿಳಿದುಕೊಂಡರೆ ಉದ್ಯೋಗಾವಕಾಶ ಕಲ್ಪಿಸು ವುದರ ಮೂಲಕ ಜೀವನ ನಿರ್ವಹಣೆಯೂ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ದೈಹಿಕ ಶಿಕ್ಷಣ ಮತ್ತು ಕ್ರೀಡೆ ಹಲವಾರು ಆಯಾಮಗಳಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿ ಜೀವನ ನಿರ್ವಹಣೆಗೆ ಅತ್ಯಂತ ವಿಪುಲವಾದ ಅವಕಾಶ ಕಲ್ಪಿಸುವ ಉತ್ತಮ ವೇದಿಕೆಯಾಗಿದೆ ಎಂದರು.

ದೈಹಿಕ ಶಿಕ್ಷಣ, ಕ್ರೀಡೆ, ಯೋಗ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಿಸಬಹುದು. ಯುವಜನತೆ ಆರೋಗ್ಯದ ಕಡೆ ಹೆಚ್ಚು ಕಾಳಜಿ ವಹಿಸುತ್ತಿದ್ದು, ಕ್ರೀಡೆಯು ಆರೋಗ್ಯ, ಮನರಂಜನದಾಯಕ ಚಟುವಟಿಕೆಯಾಗಿದೆ. ಇದು ಸಾವಿರಾರು ಜನರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಉತ್ತಮ ವೇದಿಕೆಯಾಗಿದ್ದು, ಆರ್ಥಿಕ ಪುನಶ್ಚೇತನಕ್ಕೂ ದಾರಿಯಾಗಿದೆ ಎಂದು ತಿಳಿಸಿದರು.

ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ವಿಜಯಲಕ್ಷ್ಮೀ ಮಾತನಾಡಿ, ಕ್ರೀಡೆ ವಿದ್ಯಾರ್ಥಿಗಳಲ್ಲಿ ದೈಹಿಕ, ಮಾನಸಿಕ, ಭಾವನಾತ್ಮಕ ಆರೋಗ್ಯ ಕಾಪಾಡುವುದಲ್ಲದೆ ಅವರ ಬೌದ್ಧಿಕ ಗುಣಮಟ್ಟವೂ ಉತ್ತಮವಾಗಿರುತ್ತದೆ. ಇಂತಹ ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳಲ್ಲೂ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಆದ್ದರಿಂದ ಉನ್ನತ ಶಿಕ್ಷಣದಲ್ಲಿ ಕ್ರೀಡೆ ಅವಶ್ಯಕವಾಗಿದೆ ಎಂಧರು.

ಡಾ.ಸಿ.ವೆಂಕಟೇಶ್, ಡಾ.ಪಿ. ಕೃಷ್ಣಯ್ಯ, ಡಾ.ಸಿ.ಕೃಷ್ಣ, ದೈಹಿಕ ಶಿಕ್ಷಣ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಎಚ್.ವಿ.ಉದಯಕುಮಾರ್, ಪದಾಧಿಕಾರಿಗಳಾದ ಡಾ.ಕೆ.ಎಸ್.ಭಾಸ್ಕರ್, ಡಾ. ಬಿ.ವಿ.ಗಣೇಶ್, ಡಾ.ಶಾಂತರಾಜು, ಡಾ.ಎಚ್. ಎನ್.ಭಾಸ್ಕರ ಇದ್ದರು.



ನಗರದಲ್ಲಿ ಆಯೋಜಿಸಿದ್ದ 'ಉನ್ನತ ಶಿಕ್ಷಣದಲ್ಲಿ ದೈಹಿಕ ಶಿಕ್ಷಣದ ಮಹತ್ವ' ಕಾರ್ಯಾಗಾರವನ್ನು ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ವಿಜಯಲಕ್ಷ್ಮೀ ಉದ್ಘಾಟಿಸಿದರು. ಡಾ.ಆರ್. ಶ್ರೀಕಾಂತ್, ಡಾ.ಸಿ.ವೆಂಕಟೇಶ್, ಡಾ.ಎಚ್.ವಿ.ಉದಯಕುಮಾರ್ ಇದ್ದರು.

# Report on Emphasis on Physical Education in Present Higher Education Scenario

The Department of Physical Education and Mysore University Affiliated College Physical Education Director's Association Jointly Organizing One Day Workshop on the topic **Emphasis on Physical Education in Present Higher Education Scenario** on 27-06-2023 at DOSPESS Auditorium. Work shop Inaugurated by Chief GuestProf .Vijyalakshmi, Joint Director, Department of Collegiate Education, and Dr. Srikanth, Nodal Officer, Department of College Education, Dr. C . Venktesh, Director, Dr. P Krishnaiah, Dr. C Krishna and Physical Education Teachers Association Prisdent Dr. H V UdayKumar






Dr. Vijyalakshmi Said Sports activities is very important in Higher Education.it helps to Maintaining Physical , Mental and emotional Health also Improve students intellectual quality level. It helps to develop overall studies activities and Students achieving Medal in National and International various sports Competitions, and the guest of the programme Dr. R Srikanth described Sports and Physical education in many Dimensions.it help to everyone maintaining life and Creative lots of opportune. Physical Education and yoga helps to Maintaining healthy society. Now days young peopleare taking care about health and today sports is given health, entertainment activities it also given many job opportunity and financial re-ablations